ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 06-03-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | "ಸೂಕ್ಷ್ಮ ನೀರಾವರಿ – ಮುನ್ನೋಟ" ಕುರಿತ ಕಾರ್ಯಾಗಾರ.<br><br>ಪಾಲ್ಗೊಳ್ಳುವವರು:<br><br>ಶ್ರೀ ಶ್ಯಾಮನೂರ್ ಶಿವಶಂಕರಪ್ಪ, ತೋಟಗಾರಿಕಾ ಮತ್ತು ಕೃಷಿ ಮಾರುಕಟ್ಟೆ ಸಚಿವರು.<br><br>ಅಧ್ಯಕ್ಷತೆ:<br><br>ಶ್ರೀ ಕೃಷ್ಣ ಭೈರೇಗೌಡ, ಕೃಷಿ ಖಾತೆ ರಾಜ್ಯ ಸಚಿವರು. | 07-03-2015<br>ಶನಿವಾರ<br>ಬೆಳಿಗ್ಗೆ<br>10-00 ಗಂಟೆಗೆ | ಹೋಟೆಲ್ ಲಲಿತ್ ಅಶೋಕ್, ಕುಮಾರಕೃಪ ರಸ್ತೆ, ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಶ್ರೀಶೈಲದಲ್ಲಿ ಐದು ದಿನಗಳ ಯುಗಾದಿ ಉತ್ಸವ

ಬೆಂಗಳೂರು, ಮಾರ್ಚ್ 6, (ಕರ್ನಾಟಕ ವಾರ್ತೆ)

ಆಂಧ್ರ ಪ್ರದೇಶ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಶ್ರೀಶೈಲದ ದೇವಾಲಯದಲ್ಲಿ ಮಾರ್ಚ್ 18 ರಿಂದ 22 ರವರೆಗೆ ಐದು ದಿನಗಳ ಯುಗಾದಿ ಮಹೋತ್ಸವವನ್ನು ಏರ್ಪಡಿಸಲಾಗಿದೆ. ಕರ್ನಾಟಕದಿಂದ

ಲಕ್ಷಾಂತರ ಪ್ರವಾಸಿಗರು ಈ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದು, ಇವರ ಅಗತ್ಯತೆಗಾಗಿ ಹಲವು ಏರ್ಪಾಡುಗಳನ್ನು ಮಾಡಲಾಗಿದೆ ಎಂದು ಆಂಧ್ರ ಪ್ರದೇಶ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಜಂಟಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್

## ಅಂಬೇಡ್ಕರ್ ನಿಗಮದಿಂದ ಎಂಟು ಲಕ್ಷ ಫಲಾನುಭವಿಗಳಿಗೆ ಸಹಾಯಧನ

ಬೆಂಗಳೂರು, ಮಾರ್ಚ್ 6 (ಕರ್ನಾಟಕ ವಾರ್ತೆ)

ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಪ್ರಾರಂಭದಿಂದ ಈವರೆಗೆ ಒಟ್ಟು 8,52,008 ಮಂದಿ ಫಲಾನುಭವಿಗಳಿಗೆ 2050.78 ಕೋಟಿ ರೂ.ಗಳು ಸಾಲ ಹಾಗೂ ಸಹಾಯಧನವನ್ನು ವಿತರಿಸಲಾಗಿದೆ ಎಂದು ನಿಗಮದ ಅಧ್ಯಕ್ಷರಾದ ಕುಮಾರಿ ಮಲ್ಲಾಜಮ್ಮ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಇಂದು ಪತ್ರಕರ್ತರಿಗೆ ಮಾಹಿತಿ ನೀಡಿದ ಅವರು ಪ್ರಸ್ತುತ 2014–15 ನೇ ಸಾಲಿನಲ್ಲಿ ಒಟ್ಟು 52,356 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು 387.40 ಕೋಟಿ ರೂ.ಗಳ ಅನುದಾನವನ್ನು ಖರ್ಚು ಮಾಡಲು ಕ್ರಮಕೈಗೊಳ್ಳಲಾಗಿದೆ. ಭೂ ಒಡೆತನ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಜನವರಿ ಮಾಹೆಯ ಅಂತ್ಯಕ್ಕೆ 35 ಮಹಿಳಾ ಫಲಾನುಭವಿಗಳಿಗೆ 1.70 ಕೋಟಿ ರೂ. ವೆಚ್ಚದಲ್ಲಿ 40.8 ಎಕರೆ ಜಮೀನನ್ನು ಖರೀದಿಸಿಕೊಡುವ ಮೂಲಕ ಅವರನ್ನು ಭೂ ಒಡೆಯರನ್ನಾಗಿ ಮಾಡಲಾಗಿದೆ ಎಂದರು.

ನಿಗಮದ ವತಿಯಿಂದ ಪರಿಶಿಷ್ಟ ಜಾತಿಯ ಜನಾಂಗದವರನ್ನು ಬಡತನ ರೇಖೆಯಿಂದ ಮೇಲೆ ತರುವ ಉದ್ದೇಶದಿಂದ ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ವೈಯುಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ, ಮೈಕ್ರೋ ಕ್ರೆಡಿಟ್ ಫೈನಾನ್ಸ್, ಸ್ವಯಂ ಉದ್ಯೋಗ ಯೋಜನೆ, ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ ಹಾಗೂ ಸಾಲ ಮನ್ನಾ ಮುಂತಾದ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮೈಕ್ರೋ ಕ್ರೆಡಿಟ್ ಫೈನಾನ್ಸ್ ಯೋಜನೆ ಹಾಗೂ ಸ್ವಯಂ ಉದ್ಯೋಗ ಯೋಜನೆಯಡಿ ಪರಿಶಿಷ್ಟ ಜಾತಿಯ ಗ್ರಾಮೀಣರು ಮತ್ತು ನಿರುದ್ಯೋಗಿಗಳು ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ನಿಗಮದಿಂದ ಸಾಲ ಹಾಗೂ ಸಹಾಯಧನವನ್ನು ಒದಗಿಸಲಾಗುತ್ತಿದೆ. ಹಾಗೆಯೇ ಈ ಸಮುದಾಯದವರಿಗೆ ನೀಡಲಾಗಿದ್ದ ಸೌಲಭ್ಯವನ್ನು 2013–14 ನೇ ಸಾಲಿನಲ್ಲಿ ಮನ್ನಾ ಮಾಡಲಾಗಿದ್ದು ಇದಕ್ಕಾಗಿ 511 ಕೋಟಿ ರೂ. ಅನುದಾನದ ಅವಶ್ಯಕತೆ ಇದೆ. ಆದ್ದರಿಂದ ಸರ್ಕಾರವು 2014–15 ನೇ ಸಾಲಿನ ಆಯವ್ಯಯದಲ್ಲಿ ಇದಕ್ಕಾಗಿ 100 ಕೋಟಿ ರೂ.ಗಳನ್ನು ನಿಗದಿಪಡಿಸಿದೆ ಎಂದು ಮಾಹಿತಿ ನೀಡಿದರು.

ಪಹೊ/ ಬಿಜಿಪಿ/ಕೆಎಂ

## ಸಚಿವರ ಪ್ರವಾಸ

**ಬೆಂಗಳೂರು, ಮಾರ್ಚ್ 6, (ಕರ್ನಾಟಕ ವಾರ್ತೆ)**

**ಮೂಲಸೌಲಭ್ಯ ಅಭಿವೃದ್ಧಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಖಾತೆ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಮಾರ್ಚ್ 8 ಮತ್ತು 9 ರಂದು ಧಾರವಾಡ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು.**

ಬಾಬು:ಜಿಪಿಆರ್.